


ಎಡದಿಂದ ಬಲಕ್ಕೆ :

1. ಪರಿವ್ರಾಜಕನಿಂದ ನಡೆದದ್ದು ಧಾರ್ಮಿಕ ಉಪನ್ಯಾಸ (4)
3. ಹೊಲದ ಕೆಲಸಕ್ಕೆ ಸಂಬಂಧಿಸಿದಂತೆ ವಾಗ್ವಾದ ಜಗಳ (3)
4. ವರ್ಣಮಾಲೆಯಲ್ಲೇ ಬೆರೆತಂತಿದೆ ಜಲ ದೇವತೆಯ ಹೆಸರು (3)
6. ಹನುಮನ ಶಕ್ತಿಯ ಬಗೆಗೆ ಸಂದೇಹವೇ ? (4)
7. ತಾವರೆ ಕೆರೆಯ ಮಧ್ಯದಲ್ಲಿ ಪ್ರತ್ಯಕ್ಷವಾದ ವಿಷ್ಣುವಿನ ದೈತ್ಯ ಅವತಾರ (4)
9. ಹೊಸ ಕಾರ್ಯ ಒಂದೊಂದಕ್ಕೂ ಪರಸ್ಪರ ಸಹಾಯ ಬೇಕೇ ಬೇಕು (4)
12. ಪದ್ಯದ ಅರ್ಥವನ್ನು ತಿಳಿದ ನಂತರವಷ್ಟೇ ಬೋಧನೆ (4)
14. ಆ ಸಭೆಯಲ್ಲಿ ಯಾವುದೂ ಕಷ್ಟವೇ ಇಲ್ಲ (3)
15. ಥರ ಥರ ನಡುಗಿಸುತ್ತಿದೆ ಕೊರತೆ, ಅಭಾವ (3)
16. ಸದಾಶಯದ ಕಾರ್ಯ ವಿಜಯಶಾಲಿಯಾದೀತು (4)

ಮೇಲಿಂದ ಕೆಳಕ್ಕೆ :

1. ಕಷ್ಟ ಪರಿಹರಿಸುವವನ ಬಗೆಗೂ ಹೀಗೆ ವಿಡಂಬನೆಯೇ ? (4)
2. ಹೊಸ ರೀತಿ ಏನಿಲ್ಲ, ಅದೇ ಒಂಬತ್ತು ದಿನಗಳ ಹಬ್ಬ (4)
3. ಕ್ರಮವನ್ನು ಅನುಸರಿಸಿಯೇ ನಿರ್ಮಿಸಲಾದದ್ದು ಈ ಅರ್ಧ ವೃತ್ತಾಕೃತಿ (3)
5. ಆಕ್ರಮಣ ಮಾಡ ಹೋದವರ ಮುನ್ನಡೆಯೇ ತಲೆಕೆಳಗಾಯಿತು (3)
6. ಅನ್ಯಾಯದ ಕೆಲಸ ಸ್ವಲ್ಪವೂ ಶ್ರಮವಿಲ್ಲ (4)
8. ಆ ಮಹೋದಯನ ಪ್ರಕಾರ ವಿದ್ಯೆಯೇ ಅತಿ ದೊಡ್ಡ ಸಂಪತ್ತು (4)
10. ಸಮಸ್ಯೆ ಬಗೆಹರಿಸಲು ಸಾಧ್ಯವಾಗಲೆಂದು ಆಶೀರ್ವಧಿಸು (4)
11. ಬೋರಣ್ಣನಿಗೆ ಯಾವಾಗಲೂ ಯುದ್ಧದ ಹೆದರಿಕೆ (4)
12. ಆತುರವನ್ನೆಲ್ಲ ಕೈಬಿಟ್ಟ ತರುವಾಯ .... ? (4)
13. ವ್ಯಾಪಾರದವರ ಕೈಯಲ್ಲಿ ಹಾಳೆ ಹಾಳೆ ಜೋಡಣೆ (3)

## 13-10-2016ರ ಉತ್ತರಗಳು

ಎಡದಿಂದ ಬಲಕ್ಕೆ :

1. ಅಭಿಧಾನ (=ಹೆಸರು) 3. ಸಂಹಾರ 4. ವಸತಿ 6. ಚುನಾವಣೆ 7. ಆಸವ 9. ಹಾವುಗೆ 11. ತೆಪರ 13. ಕರಾವು 15. ವ್ಯಾಸಮುನಿ 17. ಧಿಮಾಕು 18. ರಿಷಭ 19. ಲಗುಬಗೆ

ಮೇಲಿಂದ ಕೆಳಕ್ಕೆ :

1. ಅರಚು 2. ನವಣೆ 3. ಸಂತಸ 5. ತಿಳಿವು 7. ಆದ್ಯತೆ 8. ವತ್ಸರ (=ವರ್ಷ) 9. ಹಾರ್ದಿಕ 10. ಗೆಲುವು 12. ಪರಿಧಿ 14. ರಾಸಭ 15. ವ್ಯಾಕುಲ 16. ನಿರಿಗೆ

# ಪ್ರಶ್ನಾಂಕಣ

## ಗ್ರೀನ್ ಲ್ಯಾಂಡ್: ಏನು ವಿಶೇಷ ?

ಧರೆಯ 'ಅತ್ಯಂತ ದೊಡ್ಡ ದ್ವೀಪ' ವಾಗಿರುವುದೇ ಗ್ರೀನ್ ಲ್ಯಾಂಡ್ ನ ಪ್ರಥಮ ವಿಶೇಷ. ಭೂ ಉತ್ತರಾರ್ಧದಲ್ಲಿ ಅಟ್ಲಾಂಟಿಕ್ ಸಾಗರ ಮತ್ತು ಆರ್ಕ್‌ಟಿಕ್ ಸಾಗರಗಳ ನಡುವೆ, ಕೆನಡ ದೇಶದ ಈಶಾನ್ಯ ದಿಕ್ಕಿನಲ್ಲಿ ಇದರ ನೆಲೆ ( ಚಿತ್ರ 1 ರಲ್ಲಿ ಬಾಣದ ಗುರುತು ಸೂಚಿಸುತ್ತಿರುವ ದ್ವೀಪ ). ಸಮೀಪ ಇಪ್ಪತ್ತೆರಡು ಲಕ್ಷ ಚದರ ಕಿ. ಮೀ. ವಿಸ್ತಾರದ, ನಲವತ್ನಾಲ್ಕು ಸಾವಿರ ಕಿ.ಮೀ. ಉದ್ದದ ಕಡಲ ತೀರದ, ಗರಿಷ್ಠ ವೈಶಾಲ್ಯದ ವಿಶ್ವ ದಾಖಲೆಯ ಈ ದ್ವೀಪದ ಇತರ ಅತಿ ಪ್ರಮುಖ ವೈಶಿಷ್ಟ್ಯಗಳು ಇವು :

* ಗ್ರೀನ್ ಲ್ಯಾಂಡ್ ನ ನೆಲದ ಶೇಕಡ ಎಂಬತ್ತರಷ್ಟು ಭಾಗ ಶಾಶ್ವತ ಹಿಮಾವೃತ. ಈಗ್ಗೆ ಸುಮಾರು ಒಂದು ಲಕ್ಷ ವರ್ಷ ಹಿಂದಿನಿಂದ ಅಸ್ತಿತ್ವದಲ್ಲಿರುವ ಈ ಹಿಮ ಹಾಸು ಹದಿನೆಂಟು ಲಕ್ಷ ಚದರ ಕಿ.ಮೀ. ವಿಸ್ತೀರ್ಣ ಹೊಂದಿದ್ದು, ಎರಡು ಕಿ.ಮೀ. ದಪ್ಪ ಇದೆ ( ಚಿತ್ರ 2 ). ಭೂ ತಾಪ ಏರಿಕೆಯಿಂದ ನಿಧಾನವಾಗಿ ಕರಗತೊಡಗಿರುವ ಈ ಹಿಮ ಹಾಸು ಇಡೀ ಧರೆಯ ಸಾಗರಾವಾರದ ನೀರಿನ ಮಟ್ಟವನ್ನು ಇಪ್ಪತ್ತು ಅಡಿ ಏರಿಸಬಲ್ಲಷ್ಟು ಜಲರಾಶಿಯನ್ನು ಧರಿಸಿದೆ.

* ಗ್ರೀನ್ ಲ್ಯಾಂಡ್ ನಲ್ಲಿ ಹಿಮನದಿಗಳು, ಫ್ಯೋರ್ಡ್ ಗಳು (ಎಂದರೆ ಹಿಮನದಿಗಳಿಂದ ಬಗೆಯಲ್ಪಟ್ಟು ಕಡಲಿಗೆ ಚಾಚಿ ನಿಂತ ಆಳ ಕಣಿವೆಗಳು) ಮತ್ತು ಕಳಚಿ ಬಿದ್ದು ಐಸ್ ಬರ್ಗ್ ಗಳಾಗಿ ಕಡಲಲ್ಲಿ ತೇಲತೊಡಗುವ ಬೃಹತ್ ಹಿಮ ಬಂಡೆಗಳು ( ಚಿತ್ರ 3 ) ಹೇರಳ. ಇಂತಹ ರುದ್ರ ರಮ್ಯ ನಿಸರ್ಗ ನಿರ್ಮಿತಿಗಳು ಗರಿಷ್ಠ ಸಂಖ್ಯೆಯಲ್ಲಿರುವ, ಸುಮಾರು ಹತ್ತು ಲಕ್ಷ ಚದರ ಕಿ.ಮೀ. ಪ್ರದೇಶ 'ಜಗತ್ತಿನ ಅತ್ಯಂತ ವಿಸ್ತಾರ ರಾಷ್ಟ್ರೀಯ ಉದ್ಯಾನ' ವಾಗಿ ಸಂರಕ್ಷಿಸಲ್ಪಟ್ಟಿದೆ. ಆದರೆ ಶೇಕಡ ಇಪ್ಪತ್ತರಷ್ಟೇ ಹಿಮರಹಿತ ನೆಲ ಪ್ರದೇಶ ಇರುವ ಈ ದ್ವೀಪದಲ್ಲಿ ಅಡವಿ, ಹುಲ್ಲು ಬಯಲು ಇತ್ಯಾದಿ ಸಸ್ಯ ಭರಿತ ಜೀವಾವಾರಗಳಾಗಲೀ, ಕೃಷಿ ಯೋಗ್ಯ ಭೂಮಿಯಾಗಲೀ ಕಿಂಚಿತ್ತೂ ಇಲ್ಲ.

*




ವರ್ಷದ ಆರು ತಿಂಗಳು ನಿರಂತರ ಹಗಲಿನ ಬೇಸಿಗೆ ಮತ್ತು ಆರು ತಿಂಗಳು ನಿರಂತರ ಇರುಳಿನ ಚಳಿಗಾಲದ ಋತುಮಾನಗಳಿರುವ ಗ್ರೀನ್ ಲ್ಯಾಂಡ್ ನ ಆಗಸ ವರ್ಣಮಯ, ಮನಮೋಹಕ ಧ್ರುವ ಪ್ರಭೆಗಳ ದೃಶ್ಯಗಳಿಂದ ಅಲಂಕೃತ. ಈ ದ್ವೀಪದ ಮತ್ತದರ ಸುತ್ತಲಿನ ಕಡಲಿನಾವಾರದ ವನ್ಯ ಜೀವಿಗಳಲ್ಲಿ ಧ್ರುವ ಕರಡಿ, ಆರ್ಕ್ ಟಿಕ್ ನರಿ, ಸೀಲ್, ವಾಲ್ರಸ್, ನಾರ್ವಾಲ್ ಇತ್ಯಾದಿ ಪ್ರಾಣಿಗಳು ಪ್ರಮುಖ.

* ಈ ಶೀತ ಲೋಕದ ಪಶ್ಚಿಮದಂಚಿನ ಹಿಮರಹಿತ ನೆಲ ಪ್ರದೇಶದಲ್ಲಿ ಮನುಷ್ಯರೂ ನೆಲೆಸಿದ್ದಾರೆ. ಬಹುಪಾಲು ಸ್ಥಳೀಯ ಇನೂಯಿಟ್ ಜನರೇ ಇರುವ ಈ ದ್ವೀಪ ದೇಶದ ಈಗಿನ ಒಟ್ಟೂ ಜನಸಂಖ್ಯೆ ಐವತ್ತೆಂಟು ಸಾವಿರ ಅಷ್ಟೆ ! ಮೀನುಗಾರಿಕೆ ಮತ್ತು ನಾರ್ವಾಲ್ ಗಳ ಬೇಟೆಯೇ ಈ ಜನರ ಜೀವನದ ಆಹಾರದ ಆಕರ. ಡೆನ್ಮಾರ್ಕ್ ನ ಸಹಯೋಗದ ಸ್ವತಂತ್ರ ದೇಶವಾಗಿ ಗ್ರೀನ್ ಲ್ಯಾಂಡ್ ನ ಅಸ್ತಿತ್ವ.

■ ಎನ್. ವಾಸುದೇವ್